

# ಮಕ್ಕಳ ಹಕ್ಕುಗಳ ಸಂಘದ ಮಾಹಿತಿ ಕೈಪಿಡಿ

ಮಕ್ಕಳ ಹಕ್ಕುಗಳ ಸಂಘ ''ಇಂದಿನ ಮಕ್ಕಳು ಇಂದಿನ ಪ್ರಜೆಗಳು''
''ಮಕ್ಕಳಿಂದ ಮಕ್ಕಳಿಗಾಗಿ'' ಮಕ್ಕಳಿಗೋಸ್ಕರ ಮಕ್ಕಳೇ ರಚಿಸಿ,
ನಡೆಸುವ ಮಕ್ಕಳ ಸಮಿತಿಯೇ ''ಮಕ್ಕಳ ಹಕ್ಕುಗಳ ಕ್ಲಬ್''

## ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳಲ್ಲಿ ''ಮಕ್ಕಳ ಹಕ್ಕುಗಳ ಸಂಘ'' ದ ರಚನೆ ಶಾಲೆಗೊಂದು ಮಕ್ಕಳ ಹಕ್ಕುಗಳ ಸಂಘ''

## Child Rights Club (CRC)

### ಗುರಿ

''ಪ್ರತಿ ಶಾಲೆಯಲ್ಲಿ 100% ಮಕ್ಕಳ ದಾಖಲಾತಿ ಹಾಗೂ ಹಾಜರಾತಿಯನ್ನು ಖಾತ್ರಿಪಡಿಸಿ ಶಾಲೆ ಮತ್ತು ಸಮುದಾಯನ್ನು ''ಮಕ್ಕಳ ಸ್ನೇಹಿ'' ಯನ್ನಾಗಿ ಪರಿವರ್ತಿಸಿ ಮಕ್ಕಳ ಹಕ್ಕುಗಳನ್ನು ಸಂರಕ್ಷಿಸಿ , ಮಕ್ಕಳ ಸರ್ವತೋಮುಕ ಅಭಿವೃದ್ದಿಗೆ ಕಾರ್ಯನಿರ್ವಹಿಸುವುದು.

### ಉದ್ದೇಶಗಳು

1. ಸಂವಿಧಾನದ ಪ್ರಕಾರ ಮತ್ತು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯಂತೆ ಮಕ್ಕಳು ಎಲ್ಲಾ ಹಕ್ಕುಗಳ ಬಗ್ಗೆ ತಿಳಿಯುವುದು ಹಾಗೂ ತಮ್ಮ ಸಮುದಾಯದಲ್ಲಿ ಜಾಗೃತಿ ಮೂಡಿಸುವುದು.
2. ಮಕ್ಕಳ ಹಕ್ಕುಗಳ ಬಗ್ಗೆ ಆಯಾ ಶಾಲೆಯಲ್ಲಿ ಮತ್ತು ಶಾಲಾ ವ್ಯಾಪ್ತಿಯಲ್ಲಿರುವ ಸಮುದಾಯದಲ್ಲಿ ಜಾಗೃತಿ ಮೂಡಿಸುವುದು.
3. ಪ್ರತಿ ಶಾಲೆಯಲ್ಲಿ ಎಲ್ಲಾ ಶಾಲಾ ಚಟುವಟಿಕೆಗಳನ್ನು ಮಕ್ಕಳ ಹಕ್ಕುಗಳ ಆಧಾರಿತವಾಗಿ ಕಾರ್ಯಕ್ರಮಗಳನ್ನು ರೂಪಿಸುವುದು.
4. ಮಕ್ಕಳಿಗೆ ಚಟುವಟಿಕೆಗಳು ''ಮಕ್ಕಳ ಹಕ್ಕುಗಳ ಸಂಘ'' ಮುಖಾಂತರ ತೀರ್ಮಾನ ಕೈಗೊಂಡು ಕಾರ್ಯಕ್ರಮಗಳನ್ನು ರೂಪಿಸುವುದು.
5. ಮಕ್ಕಳು ಶಾಲೆ ಬಿಡುವುದನ್ನು (10 ನೇ ತರಗತಿ ತನಕ) ಸಂಪೂರ್ಣ ತಡೆಗಟ್ಟುವುದು ಹಾಗೂ ನಿರಂತರ ಜಾಗೃತಿ ಮೂಡಿಸುವುದು.
6. ಬಾಲಕಾರ್ಮಿಕ ಪದ್ಧತಿ ಹಾಗೂ ಬಾಲ್ಯ ವಿವಾಹವನ್ನು ಸಂಪೂರ್ಣ ವಿರೋಧಿಸಿ, ಖಂಡಿಸಿ ಅದರ ನಿರ್ಮೂಲನೆಗೆ ಪ್ರಯತ್ನಿಸುವುದು.
7. ಎಲ್ಲಾ ಮಕ್ಕಳ (0-18 ವರ್ಷ) ಸರ್ವತೋಮುಖ ಅಭಿವೃದ್ಧಿ, ಶಿಕ್ಷಣ ಮತ್ತು ಬಾಲ್ಯವನ್ನು ಕಾಪಾಡಿ ಉತ್ತಮ ನಾಗರಿಕರನ್ನಾಗಿ ರೂಪಿಸುವುದು.
8. ಸಮುದಾಯ, ಎಸ್.ಡಿ.ಎಂ.ಸಿ. ಗ್ರಾಮ ಪಂಚಾಯತ್, ಪೋಷಕರು, ಶಾಲೆ ಮತ್ತು ಮಕ್ಕಳು ಎಲ್ಲಾ ಒಟ್ಟಾಗಿ ಒಂದೇ ವೇದಿಕೆಯಿಂದ ಮಕ್ಕಳು ಮತ್ತು ಶಾಲೆಯ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸುವುದು.
9. ಗ್ರಾಮ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಇತರ ಮಕ್ಕಳ ಸಂಘದೊಂದಿಗೆ ಸಂಯುಕ್ತವಾಗಿ ವಿಚಾರ ವಿನಿಮಯ ಹಾಗೂ ಅಧಿಕಾರಿ/ಜನ ಪ್ರತಿನಿಧಿಗಳೊಂದಿಗೆ ಸಂಪರ್ಕ.

## ಮಕ್ಕಳ ಹಕ್ಕುಗಳ ಸಂಘದ ಕಾರ್ಯ ಚಟುವಟಿಕೆ

1. ಮಕ್ಕಳ ಹಕ್ಕುಗಳ ಬಗ್ಗೆ ಅರಿವಿನ ಕಾರ್ಯಕ್ರಮಗಳನ್ನು ಶಾಲಾ ಮಟ್ಟದಲ್ಲಿ ಮತ್ತು ಸಮುದಾಯ ಮಟ್ಟದಲ್ಲಿ ನಡೆಸುವುದು (ಚಲನಚಿತ್ರ, ಸಂಗೀತ ಸ್ಪರ್ಧೆಗಳು, ಸಾರ್ವಜನಿಕ ಸಭೆ, ಬೀದಿ ನಾಟಕ, ಮಕ್ಕಳ ಸಭೆ ಇತ್ಯಾದಿ) ಹಾಗೂ ನಿರಂತರವಾಗಿ ಈ ಕಾರ್ಯಕ್ರಮಗಳನ್ನು ಮುಂದುವರಿಸುವುದು.
2. ಪ್ರತಿ ತಿಂಗಳೂ ಸಂಘದ ಮಾಸಿಕ ಸಭೆ ಈ ಸಭೆಯಲ್ಲಿ ಎಲ್ಲಾ ಶಾಲಾ ಚಟುವಟಿಕೆಗಳ ಬಗೆ ಚರ್ಚಿಸಿ, ಮಕ್ಕಳ ಅಭಿಪ್ರಾಯ ಪಡೆದು ತೀರ್ಮಾನಿಸುವುದು.
3. ಎಲ್ಲಾ ಮಕ್ಕಳ, ಶಾಲೆಯ ಸಮಸ್ಯೆ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಈ ಸಂಘ ಮುಖಾಂತರ ಚರ್ಚಿಸಿ, ತೀರ್ಮಾನ ಕೈಗೊಂಡು ಕಾರ್ಯಗತಗೊಳಿಸುವುದು.
4. ಪ್ರತಿ 6 ತಿಂಗಳಿಗೊಮ್ಮೆ ಮಕ್ಕಳ ಹಕ್ಕುಗಳ ಕುರಿತಾಗಿ ಸಾಂಸ್ಕೃತಿಕ ಕಾರ್ಯಕ್ರಮ ಅಥವಾ ಇತರ ಸ್ಪರ್ಧೆಗಳನ್ನು ಹಮ್ಮಿಕೊಳ್ಳುವುದು.
5. ಮಕ್ಕಳ ಹಕ್ಕುಗಳ ಕುರಿತಾಗಿ ಮಕ್ಕಳಿಂದ ಗೋಡೆ ಬರಹ, ಭಿತ್ತಿ ಪತ್ರಗಳನ್ನು ತಯಾರಿಸಿ ಶಾಲಾ ವಾತಾವರಣದಲ್ಲಿ ಕಟ್ಟಡಗಳಲ್ಲಿ ಅವುಗಳನ್ನು ಬಳಸುವುದು.
6. ಎಲ್ಲಾ ಶಾಲೆ ಮತ್ತು ಸಮುದಾಯದಲ್ಲಿ ಮಕ್ಕಳಿಗೆ ಸಂಬಂಧಿಸಿದ ಕಾರ್ಯಕ್ರಮ. ರಾಷ್ಟ್ರೀಯ ಕಾರ್ಯಕ್ರಮ ಮತ್ತು ರಾಷ್ಟ್ರೀಯ ಹಬ್ಬಗಳನ್ನು ಈ ಸಂಘದ ಮುಖಾಂತರ ಚರ್ಚಿಸಿ, ತೀರ್ಮಾನ ಕೈಗೊಂಡು ಸಂಘದ ನೇತೃತ್ವದಲ್ಲಿ ಆಚರಿಸುವುದು.
7. ಬಾಲ ಕಾರ್ಮಿಕ ಮುಕ್ತ ಸಮುದಾಯವನ್ನಾಗಿ ಮಾಡುವುದು.
8. ಯಾವುದೇ ಮಗು 10 ನೇ ತರಗತಿ ತನಕ ಶಾಲೆ ಬಿಡದಂತೆ ನೋಡಿಕೊಳ್ಳುವುದು.
9. ಮಕ್ಕಳ ಹಕ್ಕು ಮತ್ತು ಹಿತವನ್ನು ಎಲ್ಲಾ ದೃಷ್ಟಿಯಿಂದ ಕಾಪಾಡುವುದು.
10. ಸಂಪೂರ್ಣ ಹಾಜರಾತಿ ಶಾಲೆಯನ್ನಾಗಿ ಮಾಡುವುದು. ಅದಕ್ಕೆ ಪೂರಕವಾದ ಎಲ್ಲಾ ಚಟುವಟಿಕೆಯನ್ನು ಸಂಘದ ಮುಖಾಂತರ ಶಾಲೆಯಲ್ಲಿ ಹಮ್ಮಿಕೊಳ್ಳುವುದು.
11. ಪ್ರತಿ ತಿಂಗಳಿಗೊಮ್ಮೆ ಎಸ್.ಡಿ.ಎಂ.ಸಿ. ಸಭೆ ಆಗುವಂತೆ ನೋಡುವುದು.
12. ತಮ್ಮ ಶಾಲಾ ವ್ಯಾಪ್ತಿಯಲ್ಲಿ ಬಾಲಕಾರ್ಮಿಕತೆ, ಬಾಲ್ಯ ವಿವಾಹ ಮತ್ತು ಮಕ್ಕಳ ಸಾಗಾಣಿಕೆ ಹಾಗೂ ಮಾರಾಟ ಪ್ರಕರಣ ಕಂಡಾಗ ಸಂಘದ ವತಿಯಿಂದ ಸಂಬಂಧಿಸಿದ ಇಲಾಖೆಗಳಿಗೆ ದೂರು ನೀಡುವುದು.
13. ತಮ್ಮ ಶಾಲಾ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಅಂಗನವಾಡಿ, ಗ್ರಾಮ ಪಂಚಾಯತ್, ಪೊಲೀಸ್ ಠಾಣೆ ಮಹಿಳಾ ಸಂಘ, ಸ್ವ-ಸಹಾಯ ಸಂಘ, ಯುವಕ ಸಂಘಗಳಿಗೆ ಭೇಟಿ ನೀಡಿ ಮಾಹಿತಿ ಪಡೆದು ಶಾಲಾ ಅಭಿವೃದ್ಧಿಗೆ ಸಹಭಾಗಿತ್ವ ಪಡೆಯುವುದು.

## ಸಂಘ ರಚಿಸುವ ವಿಧಾನ / ಕರ್ತವ್ಯಗಳು

1. ಪ್ರಾರಂಭದಲ್ಲಿ ಶಾಲಾ ಮತ್ತು ಸಮುದಾಯ ಮಟ್ಟದಲ್ಲಿ ಅರಿವಿನ ಕಾರ್ಯಕ್ರಮ ನಡೆಸಿ ಮಕ್ಕಳ ಒಪ್ಪಿಗೆ ಪಡೆದು ಸಂಘದ ಅಗತ್ಯ, ಉಪಯೋಗವನ್ನು ಅರ್ಥ ಮಾಡಿಕೊಂಡು ಸಂಘದ ರಚನೆಗೆ ಮುಂದಾಗುವುದು.
2. ಎಲ್ಲಾ ಮಕ್ಕಳು, ಸಭೆ ಸೇರಿ ಸಂಘ ರಚಿಸುವುದು.
3. ಸದಸ್ಯರುಗಳು : ಪ್ರತಿ ಶಾಲೆಯ, ಪ್ರತಿ ತರಗತಿಯಿಂದ ಕನಿಷ್ಠ ಇಬ್ಬರು ವಿದ್ಯಾರ್ಥಿ ವಿದ್ಯಾರ್ಥಿನಿಗಳು ಸದಸ್ಯರಾಗಿರುತ್ತಾರೆ. ಒಬ್ಬ ಶಿಕ್ಷಕರು (ಮುಖ್ಯೋಪಾಧ್ಯಾಯರು / ಶಿಕ್ಷಕರು) 2 ಎಸ್.ಡಿ.ಎಂ.ಸಿ. ಸದಸ್ಯರು ಮೀರದಂತೆ ಈ ಸಂಘದ ಸದಸ್ಯರನ್ನು ಮಕ್ಕಳ ಮುಖಾಂತರ ಆಯ್ಕೆ ಮಾಡಬೇಕು.
4. 20 ಮಕ್ಕಳ ಸದಸ್ಯರಲ್ಲಿ 4 ಮಕ್ಕಳನ್ನು ನಿರ್ದೇಶಕರನ್ನಾಗಿ ಮಕ್ಕಳಿಂದಲೇ ಆಯ್ಕೆ ಮಾಡಬೇಕು.
5. ಶಿಕ್ಷಕರು, ಎಸ್.ಡಿ.ಎಂ.ಸಿ. ಸದಸ್ಯರು, ಪೋಷಕರು ಸದಸ್ಯರಾಗಿ ಮಾತ್ರ ಇರುತ್ತಾರೆ. ಎಲ್ಲಾ ಸಭೆ ಮಕ್ಕಳೇ ನಡೆಸುತ್ತಾರೆ.

6. ನಡವಳಿಕೆ ಪುಸ್ತಕ ಮುಖ್ಯೋಪಾಧ್ಯಾಯರ ಕಛೇರಿಯಲ್ಲಿ ಇಡುವುದು.

7. ಪ್ರತಿ ಸಭೆಯ ನಡವಳಿಕೆಯನ್ನು ಮಕ್ಕಳೇ ಬರೆಯುತ್ತಾರೆ. ಎಲ್ಲಾ ಸದಸ್ಯರು ಸಹಿ ಮಾಡುತ್ತಾರೆ.

8. ವರ್ಷಕ್ಕೆ 2 ಸಾಮಾನ್ಯ ಸಭೆ ನಡೆಸಬೇಕು. ಅದರಲ್ಲೂ ಎಲ್ಲಾ ಮಕ್ಕಳು, ಶಿಕ್ಷಕರು, ಪೋಷಕರು, ಎಸ್.ಡಿ.ಎಂ.ಸಿ. ಸದಸ್ಯರು ಭಾಗವಹಿಸುವರು. ಸಭೆಯಲ್ಲಿ ವರದಿ ಮಂಡನೆ, ಮುಂದಿನ ಯೋಜನೆ ತಯಾರಿಸತಕ್ಕದ್ದು.

9. ಸಂಘದ ಸದಸ್ಯರು ಪ್ರತಿ ತಿಂಗಳೂ ಸಭೆ ಸೇರಿ ಪ್ರತಿ ತಿಂಗಳ ಕಾರ್ಯಕ್ರಮದ ಚರ್ಚೆ ಮತ್ತು ಮುಂದಿನ ತಿಂಗಳ ಯೋಜನೆ ತಯಾರಿಸಿ, ಕಾರ್ಯಕ್ರಮ ನಡೆಸಬೇಕು.

10. ಪ್ರತಿ ತಿಂಗಳು ಸಂಘ ಮುಖಾಂತರ ಕನಿಷ್ಠ ಒಂದು ಕಾರ್ಯಕ್ರಮ ಹಮ್ಮಿಕೊಳ್ಳುವುದು.

11. ಶಾಲಾ ವ್ಯಾಪ್ತಿಯಲ್ಲಿ "ಶಾಲೆಗೊಂದು ಮಕ್ಕಳ ಸಂಘದ ಪರಿಕಲ್ಪನೆ ಅಡಿಯಲ್ಲಿ ಪ್ರತಿ ಶಾಲೆಯಲ್ಲಿ ಮಕ್ಕಳ ಹಕ್ಕುಗಳ ಸಂಘ ರಚಿಸಲು ದಿನಾಂಕ : 23-05-2009 ಸರ್ವ ಶಿಕ್ಷಣ ಅಭಿಯಾನದ ರಾಜ್ಯ ಯೋಜನಾ ನಿರ್ದೇಶಕರ ನಿರ್ದೇಶನದಂತೆ ಜಾರಿಗೆ ತರಲಾಗುತ್ತಿದೆ.

ಭಾರತದ ಸಂವಿಧಾನದ ಪ್ರಕಾರ ಮತ್ತು ಮೂಲಭೂತವಾಗಿ ಮಕ್ಕಳ ಹಕ್ಕುಗಳು

| | | |
|---|---|---|
| ಪ್ರೀತಿ, ವಾತ್ಸಲ್ಯ | ಭಾಗವಹಿಸುವುದು | ಶಿಕ್ಷಣ |
| ಬಾಲ್ಯ, ವಿಶ್ವಾಸ | ಅಭಿಪ್ರಾಯ | ಮನರಂಜನೆ |
| ರಕ್ಷಣೆ | ಮೆಚ್ಚುಗೆ | ಅವಕಾಶ |
| ಪೋಷಣೆ | ಪೌಷ್ಠಿಕ ಆಹಾರ | ಸಂತೋಷ |
| ಆರೋಗ್ಯ | ವಸತಿ | ಸ್ನೇಹ |
| ಆಟ-ಪಾಠ | | |

1989 ರ ನವೆಂಬರ್ 20 ರಂದು "ಮಕ್ಕಳ ಹಕ್ಕುಗಳ ಒಡಂಬಡಿಕೆ"ಯನ್ನು ವಿಶ್ವಸಂಸ್ಥೆ ಅಂಗೀಕರಿಸಿ ಅನುಷ್ಠಾನಕ್ಕೆ ತಂದಿದೆ. ಭಾರತದ ಸರ್ಕಾರ 1992 ಡಿಸೆಂಬರ್ 11 ರಂದು ಅದಕ್ಕೆ ಒಪ್ಪಿ ಸಹಿ ಹಾಕಿ ಅನುಮೋದಿಸಿದೆ. ಜಗತ್ತಿನ 196 ರಾಷ್ಟ್ರಗಳು ಮಕ್ಕಳ ಹಕ್ಕುಗಳ ಈ ಒಡಂಬಡಿಕೆಗೆ ಈಗಾಗಲೇ ಒಪ್ಪಿ ಸಹಿ ಹಾಕಿ ಅನುಷ್ಠಾನಕ್ಕೆ ತರತ್ತಿವೆ. ಈ ಒಡಂಬಡಿಕೆಯಲ್ಲಿ ಒಟ್ಟು 54 ಪರಿಚ್ಛೇದಗಳಿವೆ. ಒಡಂಬಡಿಕೆಯ ಮೊದಲನೇ ಭಾಗದ 41 ಪರಿಚ್ಛೇದಗಳಲ್ಲಿ ಮುಖ್ಯವಾಗಿ 4 ಹಕ್ಕುಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ 1. ಬದುಕುವ ಹಕ್ಕು 2. ರಕ್ಷಣೆಯ ಹಕ್ಕು, 3 ಅವಕಶ ಮತ್ತು ವಿಕಾಸ ಹೊಂದುವ ಹಕ್ಕು, 4. ಭಾಗವಹಿಸುವ ಹಕ್ಕು.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಬಾಲ ವಿಕಾಸ ಸಮಿತಿಯನ್ನ ಮಾರ್ಪಾಡಿಸುವ ಬಗ್ಗೆ.

ಓದಲಾಗಿದೆ.

1. ಸರ್ಕಾರ ಆದೇಶ ಸಂ.ಮ ಮಿ 308 ಐಸಿಡಿ 05, ಬೆಂಗಳೂರು ದಿ. 16-10-06

2. ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿ: 22-10-2007 ರಂದು ನಡೆದ ನಡವಳಿಗಳು.

## ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1) ಸರ್ಕಾರದ ಆದೇಶದಲ್ಲಿ ಸಮಗ್ರ ಬಾಲವಿಕಾಸ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಪ್ರತಿ ಅಂಗನವಾಡಿ ಕೇಂದ್ರಗಳಲ್ಲಿ ಸ್ಥಳೀಯವಾಗಿ ಬಾಲವಿಕಾಸ ಸಮಿತಿಗಳನ್ನು ದಿನಾಂಕ : 16-10-06 ರಿಂದ ಜಾರಿಗೆ ಬರುವಂತೆ ರಚಿಸಲಾಗಿದೆ. ಸದರಿ ಆದೇಶದಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಗ್ರಾಮೀಣ ಪ್ರದೇಶದ ಅಂಗನವಾಡಿ ಕೇಂದ್ರಗಳ ಬಾಲವಿಕಾಸ ಸಮಿತಿಯನ್ನು ಈ ಕೆಳಕಂಡಂತೆ ರಚಿಸಲಾಗಿತ್ತು.

10. ಸಮೀಕ್ಷಾ ವ್ಯಾಪ್ತಿಯ ಆರು ವರ್ಷದೊಳಗಿನ ಎಲ್ಲಾ ಮಕ್ಕಳು, ಗರ್ಭಿಣಿ ಹಾಗೂ ಬಾಣಂತಿಯರು ಅಂಗನವಾಡಿಯಲ್ಲಿ ಫಲಾನುಭವಿಗಳಾಗಿ ದಾಖಲಾಗುವಂತೆ ನೋಡಿಕೊಳ್ಳುವುದು ಹಾಗೂ ಪರಿಶೀಲಿಸುವುದು ಅವಶ್ಯವಿದ್ದಲ್ಲಿ ವರ್ಷಕ್ಕೊಂದು ಬಾರಿ ದಾಖಲಾತಿ ಆಂದೋಲನ ನಡೆಸುವುದು.

11. ಅಂಗನವಾಡಿ ಕೇಂದ್ರವು ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 1-30 ರವರೆಗೆ ಸಮರ್ಪಕವಾಗಿ ನಡೆಯುವಂತೆ ಮೇಲ್ವಿಚಾರಣೆ ಮಾಡುವುದು.

12. ಅಂಗನವಾಡಿ ಕಾರ್ಯಕರ್ತೆಯು ಮಧಾಹ್ನ 2-30 ರಿಂದ 4-30 ರವರೆಗೆ ಮನೆ ಭೇಟಿ ಹಾಗೂ ಸ್ತ್ರೀಶಕ್ತಿ ಗುಂಪುಗಳ ಸಭೆಗಳನ್ನು ನಡೆಸುವಂತೆ ಮೇಲ್ವಿಚಾರಣೆ ಮಾಡುವುದು.

13. ಅಂಗನವಾಡಿ ಕೇಂದ್ರಕ್ಕೆ ಆಹಾರ ಸಾಮಗ್ರಿಗಳ ಸರಬರಾಜು ಆಗುವ ವೇಳೆಯಲ್ಲಿ ಸಮಿತಿಯ ಇಬ್ಬರು ಸದಸ್ಯರು ಖುದ್ದಾಗಿ ಹಾಜರಿದ್ದು, ಗುಣಮಟ್ಟ ಮತ್ತು ಸರಿಯಾದ ಪ್ರಮಾಣದಲ್ಲಿ ಸರಬರಾಜು ಆಗುವಂತೆ ನೋಡಿಕೊಂಡು ದೃಢೀಕರಿಸುವುದು.

14. ಅಂಗನವಾಡಿ ಕೇಂದ್ರಗಳಲ್ಲಿ ಪೂರಕ ಪೌಷ್ಠಿಕ ಆಹಾರ ವಿತರಣಾ ಕಾರ್ಯಕ್ರಮ ಯಾವುದೇ ಕುಂಠಿತವಿಲ್ಲದೆ ನಡೆಯುವಂತೆ ಮೇಲ್ವಿಚಾರಣೆ ನಡೆಸುವುದು. ಸ್ಥಳೀಯವಾಗಿ ದೊರಕುವ ಆಹಾರ ಪದಾರ್ಥಗಳಾದ ತರಕಾರಿ ಸೊಪ್ಪು ಮತ್ತು ಹಣ್ಣುಗಳನ್ನು ಉಚಿತವಾಗಿ ದೊರಕಿಸಲು ಪ್ರಯತ್ನಿಸುವುದು.

15. ತೀವ್ರ ನ್ಯೂನ ಪೋಷಣೆಗೆ ಒಳಗಾದ ಮಕ್ಕಳು ಬಡ ಕುಟುಂಬದಲ್ಲಿ ಇದ್ದು, ಅವರ ತಂದೆ-ತಾಯಿಗಳು ಹೆಚ್ಚಿನ ಪೌಷ್ಠಿಕ ಆಹಾರ ಹಾಗೂ ಔಷಧೋಪಚಾರ ನೀಡಲು ಅಶಕ್ತರಾಗಿದ್ದಲ್ಲಿ ಅಂತಹ ಮಕ್ಕಳಿಗೆ ಪ್ರಾಯೋಜಕತೆ ಮೂಲಕ ಸಹಾಯವನ್ನು ಒದಗಿಸುವುದು.

16. ಆರೋಗ್ಯ ಸೇವೆಗಳಾದ ಚುಚ್ಚು ಮದ್ದು ಕಾರ್ಯಕ್ರಮ, ಆರೋಗ್ಯ ತಪಾಸಣೆ ಹಾಗೂ ಆರೋಗ್ಯ ಮತ್ತು ಪೌಷ್ಠಿಕ ಶಿಬಿರ ಕ್ರಮವಾಗಿ ನಡೆಯುವಂತೆ ನೋಡಿಕೊಳ್ಳುವುದು.

17. ಅಂಗನವಾಡಿ ಕೇಂದ್ರದಲ್ಲಿ ದಾಖಲಾಗಿರುವ ಮಕ್ಕಳ ಹುಟ್ಟುಹಬ್ಬಗಳನ್ನು ಆಚರಿಸುವಂತೆ ಕ್ರಮವಹಿಸುವುದು.

18. ಅಂಗನವಾಡಿ ಕೇಂದ್ರಗಳಲ್ಲಿ ರಾಷ್ಟ್ರೀಯ ಹಬ್ಬಗಳು ಹಾಗೂ ಮಕ್ಕಳ ದಿನಾಚರಣೆ ವಿಜೃಂಭಣೆಯಿಂದ ನಡೆಯುವಂತೆ ಏರ್ಪಾಡು ಮಾಡುವುದು.

19. ಅಂಗನವಾಡಿ ಕಾರ್ಯಕರ್ತೆ ಹಾಗೂ ಶಿಶು ಅಭಿವೃದ್ಧಿ ಯೋಜನೆಯ ಮೇಲ್ವಿಚಾರಕ ಸಿಬ್ಬಂದಿ ಹಾಗೂ ಗ್ರಾಮ ಪಂಚಾಯತಿ ನಡುವೆ ಸಂಪರ್ಕ ಸೇತುವೆಯಾಗಿರುವುದು.

20. ಬಾಲವಿಕಾಸ ಸಮಿತಿಯು ಪ್ರತಿ ತಿಂಗಳು ತಪ್ಪದೇ ಸಭೆ ನಡೆಸುವುದು. ಕುಂದು ಕೊರತೆಗಳ ಬಗ್ಗೆ ಚರ್ಚಿಸುವುದು ಹಾಗೂ ಕ್ರಮ ವಹಿಸುವುದು.

21. ಅಂಗನವಾಡಿ ಕೇಂದ್ರಗಳಲ್ಲಿ 6 ವರ್ಷದೊಳಗಿನ ಮಕ್ಕಳ ಅಂಗನವಾಡಿ ಕೇಂದ್ರ ಬಿಡದಂತೆ ಪೋಷಕರಿಗೆ ಅರಿವು ಮೂಡಿಸಿ ಕ್ರಮ ವಹಿಸುವುದು.

22. ಅಂಗನವಾಡಿ ಕೇಂದ್ರಗಳನ್ನು ಬಿಟ್ಟ 6 ವರ್ಷದ ಮೇಲ್ಪಟ್ಟ ಮಕ್ಕಳು ಶಾಲೆಗೆ ಸೇರುವಂತೆ ಪೋಷಕರಿಗೆ ತಿಳಿಸಿ ಅನುಪಾಲನೆ ಮಾಡುವುದು.

23. ಅಂಗನವಾಡಿ ಕೇಂದ್ರಗಳ ಅಭಿವೃದ್ಧಿಗೆ ಅವಶ್ಯವಿರುವ ಇತರೆ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.

( ವಿ ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ - 1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

DIGNITY • EQUALITY
Spandana

Aide à l'Enfance de l'Inde

**SPANDANA**
#56, Down Town, 1st Cross,
Rukmini Nagar, Belgaum - 590 016
Ph:0831-2456293, Cell : 9480189322

**Supported by :**
A.E.I. Luxembourg,
Through TDH India Programme, Germany